ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ 'ಬೈರ' ಜನಾಂಗದವರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರಿಸುವುದಕ್ಕೆ ಸಂಬಂಧಪಟ್ಟ ಅರ್ಜಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು. ಶ್ರೀಮತಿ ಶಿವಕಾಂತ ಚತುರೆಯವರು ಈಗ ತಮ್ಮ ಹೇಳಿಕೆಯನ್ನು ಕೊಡಬಹುದು.

ಸದಸ್ಯರ ಹೇಳಿಕೆ

ಶ್ರೀಮತಿ ಶಿವಕಾಂತ ಚತುರೆ.—ಮಾನ್ಯ ಅಧ್ಯಕ್ಷರೇ, ದಿನಾಂಕ ೫-೧೦-೮೮ ರಂದು ನಾನು ತಮ್ಮ ಅನುಮತಿಯನ್ನು ಕೋರಿ ಸದನದಲ್ಲಿ ಗೈರು ಹಾಜರಿದ್ದೆ. ಅಂದು ಕರ್ನಾಟಕ ಗೃಹ ಮಂಡಲಿಯಲ್ಲಿ ೧೯೪೫ ರಿಂದ ೧೯೮೮ ರವರೆಗೆ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರವಾಗಿದೆ ಎಂದು ಪ್ರಸ್ತಾಪಿಸಿದ ಶ್ರೀ ಪ್ರತಾಪ ಚಂದ್ರ ಶೆಟ್ಟಿಯವರು ವ್ಯಕ್ತಿಗತವಾಗಿ ನನ್ನ ಹೆಸರು ಅಂದರೆ ಶಿವಕಾಂತ ಚತುರೆಯವರಿಗೆ ಬೆಂಗಳೂರು, ಬೀದರ್‌ನಲ್ಲಿ ೮ ರಿಂದ ೧೦ ನಿವೇಶನಗಳು ಇದೆ ಎಂದೂ ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದುದ್ದು. ಒಂದು ವೇಳೆ ಬೀದರ್‌ನಲ್ಲಿ ಎಂ.ಐ.ಜಿ. ಓನೇ ಮನೆಯನ್ನು ಬಿಟ್ಟು ಬೇರೆ ನಿವೇಶನವನ್ನು ಕೆ.ಹೆಚ್.ಬಿ. ಯಿಂದ ನನಗೆ ಕೊಟ್ಟಿರುವುದನ್ನು ತೋರಿಸಿದರೆ ನಾನು ಶಾಸಕಯ ಪದವಿಗೆ ರಾಜೀನಾಮೆ ಕೊಡುತ್ತೇನೆ, ಇಲ್ಲದಿದ್ದರೆ ಕಾಂಗ್ರೆಸ್ಸಿನ ಶ್ರೀ ಪ್ರತಾಪ ಚಂದ್ರ ಶೆಟ್ಟಿಯವರು ರಾಜೀನಾಮೆ ಕೊಡಲು ಈ ಸದಸ್ಯರ ಪರವಾಗಿ ಒಪ್ಪಿಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಅವರಿಗೆ ತಿಳಿಸಲಿಚ್ಛಿಸುತ್ತೇನೆ.

(ಗೊಂದಲ)

ಶ್ರೀ ಜಿ. ಎಸ್. ಆಚಾರ್.—ಅವರು ಇಲ್ಲದಿದ್ದಾಗ ಇವರು ಅವರ ಮೇಲೆ ಚಾರ್ಜ್ ಮಾಡುತ್ತಿದ್ದಾರೆ.

(ಗೊಂದಲ)

ವರದಿಯನ್ನು ಒಪ್ಪಿಸುವುದು

ಅಧ್ಯಕ್ಷರು.—ಶ್ರೀ ಜೆ. ಎ. ಫುರ್ನಾಂಡೀಸ್‌ರವರು ವರದಿಯನ್ನು ಮಂಡಿಸಿರಿ.

(ಗೊಂದಲ)

MR. SPEAKER.—"A member may with the permission of the Speaker may make a personal explanation" It is not debatable.

SRI B.IASIUS D'SOUZA.—Sir, Mr, Speaker, Sir.....

SRI R. A. NAIK.—Sir,.....

SRI VEDANTA HEMMIGE.—Sir.....

SRI R. A. NAIK.—He is a very good man.

ಅಧ್ಯಕ್ಷರು.—ಇದಕ್ಕೆ ಅವಕಾಶವನ್ನು ಕೊಟ್ಟರೆ there is no end. ಆದ್ದರಿಂದ ತಾವು ಶಾಂತವಾಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.—ಎಲ್ಲರ ಮೇಲೂ ಈ ರೀತಿಯಾಗಿ ಆಪಾದನೆ ಬರುತ್ತದೆ ಶ್ರೀ ಪ್ರತಾಪಚಂದ್ರ ಶೆಟ್ಟಿಯವರೆ ಅವರೇ ಉತ್ತರವನ್ನು ಇದಕ್ಕೆ ಹೇಳಬೇಕು.

(ಗೊಂದಲ)

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಿರಿ.

SRI J. A. FERNANDEZ (Chairman, Committee on the Papers Laid).—Mr. Speaker, Sir, I wish to present the 6th Report of the Committee on Papers Laid on the table.

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

೧೯೮೮-೮೯ರ ಪೂರಕ ಅಂದಾಜುಗಳ ಮಂಡನೆ

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—Sir, I present the Supplementary Estimates (First Instalment) for the year 1988-89 as required under Article 205 (1) Of the Constitution of India.

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಯಿತು.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಗುತ್ತಿಗೆ ಶಿಕ್ಷಕರನ್ನು ಖಾಯಂಗೊಳಿಸಲು ಸತ್ಯಾಗ್ರಹ ಹೂಡಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ನಾವು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅಲ್ಲಿ ಗುತ್ತಿಗೆ ಶಿಕ್ಷಕರು ಆಮರಣಾಂತ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಪಂಪಾವತಿ.—ಎಷ್ಟೋ ಜನ ಗುತ್ತಿಗೆ ಶಿಕ್ಷಕರು ಆಸ್ಪತ್ರೆಗೆ ಸೇರಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಆದ್ದರಿಂದ ತಾವು ದಯವಿಟ್ಟು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ಅಡ್‌ಜರ್ನ್‌ಮೆಂಟ್ ಮೋಷನ್.....

ಅಧ್ಯಕ್ಷರು.—ನಾನು ನಿಮ್ಮ ಅಡ್ಜರ್ನ್‌ಮೆಂಟ್ ಮೋಷನನ್ನು ರಿಜಕ್ಟ್ ಮಾಡಿಲ್ಲ. ಇವತ್ತು ಏನೇನು ವಿಷಯಗಳು ಇದೆ ಎಂದರೆ ಅಡ್ಜರ್ನ್‌ಮೆಂಟ್ ಮೋಷನ್ನು ಮಾನ್ಯ ಯಡಿಯೂರಪ್ಪನವರು ಕೊಟ್ಟಿದ್ದಾರೆ, ತಾವು ಕೂಡಾ ಕೊಟ್ಟಿದ್ದೀರಿ, ಗುತ್ತಿಗೆ ಶಿಕ್ಷಕರ ಸತ್ಯಾಗ್ರಹದ ಬಗ್ಗೆ ಎಲ್ಲರೂ ಕೊಟ್ಟಿದ್ದೀರಿ, ಸಿ ಪಿ ಐ., ಸಿ.ಪಿ.ಎಂ. ಮತ್ತು ಬಿಜೆಪಿ, ಕಾಂಗ್ರೆಸ್ ಎಲ್ಲರೂ ಕೊಟ್ಟಿದ್ದೀರಿ. ಸ್ವಲ್ಪ ಕೂಡ್ರಿ ಹೇಳುತ್ತೇನೆ. ಇವತ್ತು ಎಷ್ಟು ವಿಷಯಗಳು ಇದ್ದಾವೆ ಎಂದು ಹೇಳುತ್ತೇನೆ. ಇವತ್ತು ಸದನದಲ್ಲಿ ಮಹತ್ವದ ಮಸೂದೆಗಳು ಇದೆ, ಆರು ಗಮನ ಸೆಳೆಯುವ ಸೂಚನೆಗಳು ಇವೆ, ಒಂದಲ್ಲ